# 1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು

## ಸಿ.ಸಿಃ 2004/2014

| | | | |
|---|---|---|---|
| ಸಾಕ್ಷಿದಾರರ ಹೆಸರು | | **ಪ್ರದೀಪ್** | ಪ್ರಾಸಾಃ 1 |
| ತಂದೆಯ/ಗಂಡನ ಹೆಸರು | | ಎ.ಎನ್ ವೆಂಕಟೇಶ್ | ಚಾಸಾಃ 1 |
| ವಯಸ್ಸು | | 35 ವರ್ಷ | |
| ಕೆಲಸ | | ವ್ಯವಸಾಯ | ಸಾ ಪ್ರ ಬೋ |
| ವಾಸ | | ಅತ್ತಳ್ಳಿ ಗ್ರಾಮ, ಟಿ ನರಸೀಪುರ | ದಿಃ 16/08/2022 |

**ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದಃ**

ಈ ಕೇಸಿನಲ್ಲಿ ಅಪಘಾತದಿಂದ ಮೃತಪಟ್ಟ ಎ.ಎನ್ ವೆಂಕಟೇಶ್ ನನ್ನ ತಂದೆಯಾಗಿರುತ್ತಾರೆ. ದಿನಾಂಕ 10.06.2014 ರಂದು ನನ್ನ ತಂದೆಯವರು ನನ್ನ ಚಿಕ್ಕಪ್ಪನ ಬೈಕ್ ಸಂಖ್ಯೆ ಕೆಎ-05-ಇಬಿ-8697 ಬೈಕಿನಲ್ಲಿ ನಂಜನಗೂಡಿನ ಶ್ರೀಕಂಠೇಶ್ವರ ಸ್ವಾಮಿಯ ದೇವಸ್ಥಾನಕ್ಕೆ ಪೂಜೆಗೆಂದು ಹೊರಟಿರುತ್ತಾರೆ. ದೇವಸ್ಥಾನದಲ್ಲಿ ಪೂಜೆ ಮುಗಿಸಿಕೊಂಡು ಬರುವಾಗ ನಂಜನಗೂಡು-ಟಿ ನರಸೀಪುರ ರಸ್ತೆಯ ಕಲ್ಕುಂದ ಗ್ರಾಮದ ಮುಂದೆ ನಮ್ಮ ತಂದೆಯವರಿಗೆ ರಸ್ತೆ ಅಪಘಾತವಾಗಿದ್ದು ಟಾಟಾ ಗೂಡ್ಸ್ ನಂಬರ್ ಕೆಎ-55-3288 ವೈಟ್ ಕಲರ್ ಗಾಡಿಯು ಡಿಕ್ಕಿ ಪಡಿಸಿರುತ್ತದೆ ಎಂದು ಫೋನ್ ಮಾಡಿ ಯಾರೋ ತಿಳಿಸಿರುತ್ತಾರೆ. ಆಗ ನಾನು ಅಪಘಾತದ ಸ್ಥಳಕ್ಕೆ ಸುಮಾರು 5.15 ರಿಂದ 5.30 ಗಂಟೆಗೆ ಬಂದು ನೋಡಿದಾಗ ನನ್ನ ತಂದೆಯವರ ತಲೆಗೆ , ಕಾಲಿಗೆ ತೀವ್ರ ಪೆಟ್ಟಾಗಿ ಅವರು ಸ್ಥಳದಲ್ಲಿ ಮೃತಪಟ್ಟಿರುತ್ತಾರೆ. ರಸ್ತೆಯ ಎಡಭಾಗದಲ್ಲಿ ನನ್ನ ತಂದೆಯ ಗಾಡಿ ಇತ್ತು. ಸದರಿ ಅಪಘಾತವೂ ಗೂಡ್ಸ್ ವಾಹನದ ಚಾಲಕ ವಾಹನವನ್ನು ಅತೀ ವೇಗವಾಗಿ ಚಲಾಯಿಸಿದ ಕಾರಣಕ್ಕೆ ಆಗಿರುತ್ತದೆ. ಅಪಘಾತದ ಬಗ್ಗೆ ನಾನು ಬದನವಾಳು ಪೊಲೀಸರಿಗೆ ದೂರು ನೀಡಿರುತ್ತೇನೆ. ಅಪಘಾತ ನಡೆದ ಮರುದಿನ ಅಪಘಾತವಾದ ಸ್ಥಳವಾದ ನಂಜನಗೂಡು-ಟಿ ನರಸೀಪುರ ಮುಖ್ಯ ರಸ್ತೆಯ ಕಲ್ಕುಂದ ಗೇಟ್ ಬಳಿ ಚಾಸಾ-2 ಮತ್ತು 3 ರವರ ಸಮಕ್ಷಮ ಬೆಳಗ್ಗೆ 10.30 ರಿಂದ 11.30 ರವರೆಗೆ ಪಂಚನಾಮೆ ಜರುಗಿಸಿ ಅಪಘಾತಕ್ಕೆ ಈಡಾದ ಮೋಟರ್ ಸೈಕಲ್ ಮತ್ತು ಅಪಘಾತ

ಪಡಿಸಿದ ಟಾಟಾ ಗೂಡ್ಸ್ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಅಪಘಾತವಾದ 20-25 ದಿನಗಳ ನಂತರ ಬದನವಾಳು ಪೊಲೀಸರು ಅಪಘಾತ ಪಡಿಸಿದ ವಾಹನದ ಚಾಲಕನನ್ನು ಠಾಣೆಯಲ್ಲಿ ತೋರಿಸಿರುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಅಪಘಾತವೂ ಆರೋಪಿಯ ತಪ್ಪಿನಿಂದ ಜರುಗಿರುತ್ತದೆ. ಈಗ ನನಗೆ ತೋರಿಸಿದ ದಾಖಲೆಗಳಲ್ಲಿ ನನ್ನ ರುಜು ಇರುತ್ತದೆ. ಸದರಿ ದಾಖಲೆಗಳು ದೂರು ಮತ್ತು ಸ್ಥಳ ಪಂಚನಾಮೆ ಯಾಗಿದ್ದು ಅವುಗಳನ್ನು ನಿಪಿ-1 ಮತ್ತು ನಿಪಿ-2 ಎಂದು, ಸಾಕ್ಷಿ ಗುರುತಿಸಿದ ತಮ್ಮ ಸಹಿಯನ್ನು ನಿಪಿ-1(ಎ) ಮತ್ತು ನಿಪಿ-2(ಎ) ಎಂದು ಗುರುತಿಸಲಾಯಿತು. ಅಪಘಾತಕ್ಕೆ ಈಡಾದ ಮೋಟರ್ ಬೈಕ್ ಮತ್ತು ಟಾಟಾ ಗೂಡ್ಸ್ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಭಾವಚಿತ್ರಗಳನ್ನು ನೋಡಿ ಮೋಟರ್ ಸೈಕಲ್ ಮತ್ತು ಗೂಡ್ಸ್ ವಾಹನವನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಭಾವ ಚಿತ್ರಗಳ ಸಿಡಿ ಅಥವಾ ನೆಗಟಿವ್ ಇರುವುದಿಲ್ಲ. ಆರೋಪಿ ಪರ ವಕೀಲರು ಸದರಿ ಭಾವ ಚಿತ್ರಗಳನ್ನು ನಿಶಾನೆಯಾಗಿ ಗುರುತಿಸಲು ತಮ್ಮ ತಕರಾರು ಇರುವುದಿಲ್ಲವೆಂದು ನುಡಿದಿದ್ದರಿಂದಾಗಿ ಭಾವ ಚಿತ್ರಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎ.ಎಂ.ಎಸ್. ಆರೋಪಿ ಪರ ವಕೀಲರಿಂದಃ**

ನಾನು ಅಪಘಾತವನ್ನು ಕಣ್ಣಾರೆ ಕಂಡಿಲ್ಲ. ಅಪಘಾತದ ಬಗ್ಗೆ ನನ್ನ ಚಿಕ್ಕಪ್ಪ ಅಚ್ಯುತ ಚಾಸಾ-8 ರವರು ತಿಳಿಸಿರುತ್ತಾರೆ. ಆಗ ನಾನು ನಮ್ಮ ಊರಿನ ಗದ್ದೆಯಲ್ಲಿ ಇದ್ದೆ. ನಮ್ಮ ಊರಿನಿಂದ ಅಪಘಾತ ನಡೆದ ಸ್ಥಳಕ್ಕೆ ಬರಲು ಅರ್ಧ ಗಂಟೆ ಸಮಯ ಬೇಕು. ನನ್ನ ತಂದೆಗೆ ಅಪಘಾತವಾದ ಸಮಯದಲ್ಲಿ ಸುಮಾರು 57-58 ವರ್ಷ ವಯಸ್ಸಾಗಿತ್ತು. ನನ್ನ ತಂದೆಗೆ ಅಪಘಾತವಾದಾಗ 60 ವರ್ಷಕ್ಕಿಂತ ಹೆಚ್ಚಿನ ವಯಸ್ಸಾಗಿದ್ದು ಅವರಿಗೆ ಸರಿಯಾಗಿ ಕಣ್ಣು ಕಾಣಿಸುತ್ತಿರಲಿಲ್ಲ ಮತ್ತು ಅವರು ದ್ವಿಚಕ್ರ ವಾಹನವನ್ನು ಚಾಲನೆ ಮಾಡಲು ಸಮರ್ಥರಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ಸ್ಥಳದಲ್ಲಿ ರಸ್ತೆಯು ತಿರುವಿನಿಂದ ಕೂಡಿದೆ ಎಂದರೆ ಸಾಕ್ಷಿಯು ಅಪಘಾತದ ನಡೆದ ಸ್ಥಳದಲ್ಲಿ ರಸ್ತೆಯು ತಿರುವಿನಿಂದ ಕೂಡಿಲ್ಲ ಕಲ್ಕುಂದ ಗೇಟಿನ ಮುಂದೆ ರಸ್ತೆಯು ತಿರುವಿನಿಂದ ಕೂಡಿದೆ ಎಂದು ನುಡಿಯುತ್ತಾರೆ. ತಿರುವಿನಿಂದ ಕೂಡಿರುವ ರಸ್ತೆಯಲ್ಲಿ ವಾಹನಗಳನ್ನು ಸಾಮಾನ್ಯವಾಗಿ ನಿಧಾನವಾಗಿ ಚಾಲನೆ ಮಾಡುತ್ತಾರೆ ಎಂದರೆ ಸಾಕ್ಷಿಯು ಅಪಘಾತ ನಡೆದ ಸ್ಥಳದಲ್ಲಿ ರಸ್ತೆಯು ತಿರುವಿನಿಂದ ಕೂಡಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯು ತಿರುವಿನಲ್ಲಿ ರಸ್ತೆಯ ಎಡಭಾಗದಲ್ಲಿ ವಾಹನವನ್ನು ಚಲಾಯಿಸದೇ ತಾವಾಗಿಯೇ ಎದುರುನಿಂದ ಬರುತ್ತಿದ್ದ ವಾಹನಕ್ಕೆ ಡಿಕ್ಕಿ ಪಡಿಸಿ ಅಪಘಾತಪಡಿಸಿದ್ದರೆ ಎಂದರೆ ಸರಿಯಲ್ಲ.

ದೂರನ್ನು ನಾನು ಟಿ ನರಸೀಪುರ ಆಸ್ಪತ್ರೆಯಲ್ಲಿ ನೀಡಿರುತ್ತೇನೆ. ಪರಿಹಾರ ಪಡೆಯುವ ಸಲುವಾಗಿ ಆರೋಪಿಯ ವಿರುದ್ಧ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ.

ಸ್ಥಳ ಮಹಜರ್ ಗೆ ಬರುವಂತೆ ಪೊಲೀಸರು ನನಗೆ ನೋಟೀಸ್ ನೀಡಿರಲಿಲ್ಲ, ಫೋನ್ ಮಾಡಿ ತಿಳಿಸಿದ್ದರು. ಅಪಘಾತ ನಡೆದ ರಸ್ತೆಯು ವಾಹನಸಂದಣಿಯಿಂದ ಕೂಡಿರುತ್ತದೆ ಎಂದರೆ ಸರಿ. ಪಂಚನಾಮೆ ಕಾಲಕ್ಕೆ ನನ್ನೊಂದಿಗೆ ಪೊಲೀಸರು ಮತ್ತು ಚಾಸಾ-2 ಮತ್ತು 3 ಇದ್ದರು. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸ್ ಠಾಣೆಯಲ್ಲಿ ಪೊಲೀಸರ ಕೋರಿಕೆಯಂತೆ ನಿಪಿ-2 ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಓ**

ಸಹಿ/-

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**